ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

**Karnataka State Road Transport Corporation**
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

**ಸಂ.ಕರಾಸ:ಕೇಕ:ಆಡಳತ:ಸೇನಿ:** 310 :2019-20 **ದಿನಾಂಕ:** 25/26-02-2020

# ಸುತ್ತೋಲೆ ಸಂಖ್ಯೆ : 1672

**ವಿಷಯ:** ಕರ್ನಾಟಕ ನಾಗರೀಕ ಸೇವಾ ನಿಯಮ, ನಿಯಮ 41 (ಸಿ) ರಲ್ಲಿನ ತಿದ್ದುಪಡಿ ಅವಕಾಶದಂತೆ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಾಜಿ ಸೈನಿಕರಿಗೆ ವೇತನ ಸಂರಕ್ಷಣೆಯನ್ನು ನೀಡುವ ಕುರಿತು ಮುಂದುವರೆದ ನಿರ್ದೇಶನಗಳು.

**ಉಲ್ಲೇಖ:** 1) ಸುತ್ತೋಲೆ ಸಂಖ್ಯೆ:1467, ದಿನಾಂಕ:24-07-2012
2) ಸರ್ಕಾರದ ಅಧಿಸೂಚನೆ-I ಸಂಖ್ಯೆ ಎಫ್‌ಡಿ 3 ಎಸ್‌ಆರ್‌ಎ 2012, ದಿನಾಂಕ: 28-01-2013
3) ಮಂಡಳ ಠರಾವು 10149, ದಿನಾಂಕ:27-01-2020

- - - - -

ಕ.ರಾ.ರ.ಸಾ.ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಾಜಿ ಸೈನಿಕರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮದ ನಿಯಮ 41 (ಸಿ) ರಲ್ಲಿರುವಂತೆ ವೇತನ ಸಂರಕ್ಷಣೆಯನ್ನು (ಮಾಜಿ ಸೈನಿಕರು ವಿಮೋಚನೆಗೊಂಡ ಸಂದರ್ಭದಲ್ಲಿ ಪಡೆದ ಅಂತಿಮ ಮೂಲ ವೇತನ) ದಿನಾಂಕ:01.08.2012 ರಿಂದ ಜಾರಿಗೆ ಬರುವಂತೆ ಸುತ್ತೋಲೆ ಸಂಖ್ಯೆ:1467, ದಿನಾಂಕ: 24-07-2012 ರನ್ವಯ ಅವಕಾಶ ಕಲ್ಪಿಸಲಾಗಿದೆ.

ಪ್ರಸ್ತುತ, ಕರ್ನಾಟಕ ಸರ್ಕಾರದ ಅಧಿಸೂಚನೆ-1 ಸಂಖ್ಯೆ: ಎಫ್‌ಡಿ 3 ಎಸ್‌ಆರ್‌ಎ 2012, ಬೆಂಗಳೂರು ದಿನಾಂಕ: 28-01-2013 ರಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮ 41 (ಸಿ) ನಿಯಮದ 5ನೇ ಉಪಬಂಧದ ನಂತರ ಈ ಕೆಳಗಿನ ವಿವರಣೆಯನ್ನು ಸೇರಿಸತಕ್ಕದ್ದು, ಅಂದರೆ "ಈ ಉಪಬಂಧದ ಸಲುವಾಗಿ ವೇತನದಲ್ಲಿ ಸರ್ಕಾರಿ ನೌಕರನು ಮಿಲಿಟರಿ ಸೇವೆಯಲ್ಲಿ ಅಂತಿಮವಾಗಿ ಪಡೆದ ಮೂಲ ವೇತನ, ಗ್ರೇಡ್ ಪೇ, ಎಕ್ಸ್ ಗ್ರೂಪ್ ಪೇ (ಎಲ್ಲೆಲ್ಲಿ ಅನ್ವಯಿಸುವುದೋ ಅಲ್ಲಿ) ಯನ್ನು ಒಳಗೊಳ್ಳುವುದು". ಎಂದು 2013 ಜನವರಿ 28 ನೇ ದಿನಾಂಕದಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಲಾಗಿರುತ್ತದೆ.

ಆದ್ದರಿಂದ, ಕರ್ನಾಟಕ ಸರ್ಕಾರದ ಅಧಿಸೂಚನೆ-1 ಸಂಖ್ಯೆ: ಎಫ್‌ಡಿ 3 ಎಸ್ ಆರ್ ಎ 2012, ಬೆಂಗಳೂರು ದಿನಾಂಕ: 28-01-2013 ರನ್ವಯ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಾಜಿ ಸೈನಿಕರಿಗೆ ಮಿಲಿಟರಿ ಸೇವೆಯಲ್ಲಿ ಅಂತಿಮವಾಗಿ ಪಡೆದ ಮೂಲ ವೇತನ, ಗ್ರೇಡ್ ಪೇ, ಎಕ್ಸ್ ಗ್ರೂಪ್ ಪೇ (ಎಲ್ಲೆಲ್ಲಿ ಅನ್ವಯಿಸುವುದೋ ಅಲ್ಲಿ) ಯನ್ನು ಒಳಗೊಳ್ಳುವುದು ಎಂಬ ಸರ್ಕಾರದ ಆದೇಶವನ್ನು ನಿಗಮದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯವೆಂದು ಪರಿಗಣಿಸಿ ಪ್ರಸ್ತಾವನೆಯನ್ನು ನಿಗಮದ ನಿರ್ದೇಶಕರ ಮಂಡಳ ಸಭೆಯಲ್ಲಿ ಮಂಡಿಸಲಾಗಿದ್ದು, ನಿಗಮದ ನಿರ್ದೇಶಕರ ಮಂಡಳಯು ಠರಾವು ಸಂಖ್ಯೆ: 10149, ದಿನಾಂಕ:27-01-2020 ರನ್ವಯ ಒಪ್ಪಿಗೆ ನೀಡಿರುತ್ತದೆ.

..2

Janardhan

ಮುಂದುವರೆದ ಪುಟ...............................
Continuation Sheet.......................



ಆದ್ದರಿಂದ, ಸುತ್ತೋಲೆ ಸಂಖ್ಯೆ 1467, ದಿನಾಂಕ: 24-07-2012 ರಲ್ಲಿ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಾಜಿ ಸೈನಿಕರಿಗೆ ವೇತನ ಸಂರಕ್ಷಣೆ ನೀಡುವ ವಿಷಯದಲ್ಲಿ ಮಾಜಿ ಸೈನಿಕರು ಮಿಲಿಟರಿ ಸೇವೆಯಲ್ಲಿ ಪಡೆದ ಅಂತಿಮ ಮೂಲ ವೇತನ ಎನ್ನುವಲ್ಲಿ "ಮಾಜಿ ಸೈನಿಕರು ಮಿಲಿಟರಿ ಸೇವೆಯಲ್ಲಿ ಅಂತಿಮವಾಗಿ ಪಡೆದ ಮೂಲ ವೇತನ, ಗ್ರೇಡ್ ಪೇ, ಎಕ್ಸ್ ಗ್ರೂಪ್ ಪೇ (ಎಲ್ಲೆಲ್ಲಿ ಅನ್ವಯಿಸುವುದೋ ಅಲ್ಲಿ) ಎಂದು ಪರಿಗಣಿಸುವುದು".

ಸದರಿ ಅವಕಾಶವನ್ನು 2013-14 ನೇ ಆರ್ಥಿಕ ವರ್ಷದಿಂದ ನೋಷನಲ್ ಆಗಿ ನಿಗದಿಗೊಳಿಸಿ, ಇದರಿಂದ ಉಂಟಾಗುವ ಆರ್ಥಿಕ ಸೌಲಭ್ಯವನ್ನು 2019-20 ನೇ ಸಾಲಿನ ಆರ್ಥಿಕ ವರ್ಷದಿಂದ ಭವಿಷ್ಯವರ್ತಿಯಾಗಿ ನೀಡುವುದು.

ಸಂಬಂಧಪಟ್ಟವರೆಲ್ಲರೂ ಮೇಲಿನ ತಿದ್ದುಪಡಿಯನ್ನು ಮನದಟ್ಟು ಮಾಡಿಕೊಂಡು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು. ಉಳಿದಂತೆ ಸುತ್ತೋಲೆ ಸಂಖ್ಯೆ:1467, ದಿನಾಂಕ:24-07-2012 ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)
ವ್ಯವಸ್ಥಾಪಕ ನಿರ್ದೇಶಕರು

<u>ಪ್ರತಿ ಮಾಹಿತಿಗಾಗಿ:</u>

1. ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಈಕರಸಾಸಂಸ್ಥೆ ರವರಿಗೆ.
3. ನಿರ್ದೇಶಕರು(ಸಿ:ಪ)/ ನಿರ್ದೇಶಕರು(ಭ:ಜಾ), ಕರಾರಸಾ ನಿಗಮ, ರವರಿಗೆ.

<u>ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>

4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ವಿಭಾಗೀಯ ಮುಖ್ಯಸ್ಥರುಗಳು, ಕರಾರಸಾ ನಿಗಮ ರವರುಗಳಿಗೆ.
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ನೇಮಕ), ಕರಾರಸಾ ನಿಗಮ/ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾ ಸಂಸ್ಥೆ/ವಾಕರಸಾ ಸಂಸ್ಥೆ/ಈಕರಸಾ ಸಂಸ್ಥೆ ರವರಿಗೆ.
6. ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ, ಪ್ರದರ್ಶಿತಗೊಂಡ ಬಗ್ಗೆ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ಸಿಬ್ಬಂದಿ) ರವರಿಗೆ ವರದಿ ಸಲ್ಲಿಸುವುದು.
7. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
8. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.
9. ಪ್ರಧಾನ ಕಛೇರಿ ಪತ್ರ ಕಡತ.